ಮುಳಬಾಗಿಲು ತಾಲ್ಲೂಕಿನಲ್ಲಿ ಅಭಾವ ಪರಿಸ್ಥಿತಿ ಬಗ್ಗೆ

೧೫೧೦. ಶ್ರೀ ಆರ್. ವೆಂಕಟರಾವಂಯ್ಯ (ಮುಳಬಾಗಿಲು).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಳಬಾಗಿಲು ತಾಲ್ಲೂಕಿನ ಬೈರಕೂರು ಹೋಬಳಿಯ ೭೫ ಹಳ್ಳಿಗಳಲ್ಲಿ ಹಾಗೂ ದಂಗ್ಗಸಂದ್ರ ಹೋಬಳಿ ೭೫ ಹಳ್ಳಿಗಳಲ್ಲಿ ಮಳೆಯಿಲ್ಲದೆ ಬೆಳೆಗಳು ವಿಫಲವಾಗಿರುವುದು, ಕುಡಿಯಂವ ನೀರಿಗೆ ತುಂಬಾ ಅಭಾವವಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ, ಈ ಹಳ್ಳಿಗಳನ್ನು ಅಭಾವ ಪ್ರದೇಶಗಳೆಂದು ಯಾಕೆ ಘೋಷಿಸಿಲ್ಲ;

ಆ) ಈ ಬಗ್ಗೆ ರೈತರಿಗೆ ಸಹಾಯ ಮಾಡಲಂ ಸರ್ಕಾರದವರು ಯಾವ ಕ್ರಮವನ್ನು ಕೈಗೊಳ್ಳುವರು;

ಇ) ಅಭಾವ ಪರಿಹಾರ ಕ್ರಮ ಕೈಕೊಂಡು ರೈತರಿಗೆ ಹಾಗೂ ಕೃಷಿ ಕಾರ್ಮಿಕರಿಗೆ ಸಹಾಯ ಮಾಡಲಾಗುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು). —

ಅ) ಮುಳಬಾಗಿಲು ತಾಲ್ಲೂಕಿನ ಬೈರಕೂರು ಮತ್ತು ದಂಗ್ಗಸಂದ್ರ ಹೋಬಳಿಗಳ ಎಲ್ಲಾ ಹಳ್ಳಿಗಳನ್ನು ಅಭಾವ ಪೀಡಿತ ಹಳ್ಳಿಗಳೆಂದು ಗುರುತಿಸಲಾಗಿದೆ.

ಆ) ಯೋಜನಾ ಕಾರ್ಯಕ್ರಮಗಳಾದ ಎನ್. ಆರ್. ಇ. ಪಿ., ಆರ್. ಎಲ್. ಇಜಿಪಿ, ಡಿಪಿಎಪಿ ಮುಂತಾದವುಗಳಡಿಯಲ್ಲಿರುವ ಹಣವನ್ನು ಉಪಯೋಗಿಸಿಕೊಂಡು ಉದ್ಯೋಗ ಸೃಜನೆ ಮಾಡಿ ಅಭಾವ ಪರಿಹಾರ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುವಂತೆ ಜಿಲ್ಲಾಧಿಕಾರಿಯವರಿಗೆ ಆದೇಶ ನೀಡಲಾಗಿದೆ, ಮೇಲಿನ ಶೀರ್ಷಿಕೆಗಳಡಿಯಲ್ಲಿ ಮುಳಬಾಗಿಲು ತಾಲ್ಲೂಕಿನಲ್ಲಿ ಬಿಡುಗಡೆ ಮಾಡಿದ ಹಣ ಮತ್ತು ಪ್ರತಿದಿನದ ಕೂಲಿಗಾರರ ಹಾಜರಾತಿ ಈ ಕೆಳಕಂಡಂತೆ ಇರುತ್ತದೆ.

(೧೯೮೭ನೇ ಜನವರಿ ೩೧ರಲ್ಲಿ ಇದ್ದಂತೆ)

	ಉದ್ಯೋಗ ಸೃಜನೆ	ಬಿಡುಗಡೆಯಾದ ಹಣ (ಲಕ್ಷ ರೂ. ಗಳಲ್ಲಿ)	ಪ್ರತಿದಿನದ ಕೂಲಿಗಾರರ ಸಂಖ್ಯೆ
೧)	ಅಭಾವ ಪರಿಹಾರ	೧೩.೬೫	೯೦
೨)	ಎನ್. ಆರ್. ಇ. ಪಿ.	೧೨.೪೮	೫೨೦
೩)	ಆರ್. ಎಲ್. ಇ. ಜಿ. ಪಿ.	೯.೧೪	೧೩೫
೪)	ಡಿ. ಪಿ. ಎ. ಪಿ.	೪.೨೭	೨೨೦
೫)	ಇತರೆ	೨೧.೮೪	೧೫೦
	ಒಟ್ಟು	೬೧.೩೮	೧೧೧೫

೧೯೮೬-೮೭ನೇ ಸಾಲಿನಲ್ಲಿ ಎಲ್ಲ ಕಾರ್ಯಕ್ರಮಗಳೂ ಸೇರಿ ೭೮ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಮತ್ತು ಜನವರಿ ೮೭ರ ಅಂತ್ಯದವರೆಗೆ ೨.೨೪ ಲಕ್ಷ ಮಾನವ ದಿನಗಳಷ್ಟು ಉದ್ಯೋಗವನ್ನು ಕಲ್ಪಿಸಲಾಗಿದೆ.

೨) ಮೇಲೆ ಹೇಳಿದ ಹೋಬಳಿಗಳ, ಹಳ್ಳಿಗಳಲ್ಲಿರುವ ಜಾನುವಾರುಗಳಿಗೆ ಸಧ್ಯದಲ್ಲಿ ಮೇವಿನ ಮತ್ತು ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ. ಮುಳಬಾಗಿಲು ತಾಲ್ಲೂಕಿನಲ್ಲಿ ಒಟ್ಟು ೬೯೦ ಕೊಳವೆ ಬಾವಿಗಳು ಕೆಲಸ ಮಾಡುತ್ತಿವೆ.

ಶಿರಾ ತಾಲ್ಲೂಕು ಕಸಬಾ ಹೋಬಳಿ ಮುಡಗೆರೆ ಗ್ರಾಮದ ತಿಮ್ಮಜ್ಜ ಕೆರೆಯ ಬಗ್ಗೆ.

೮೪೨. ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿರಾ ತಾಲ್ಲೂಕು ಕಸಬಾ ಹೋಬಳಿ ಮುಡಗೆರೆ ಗ್ರಾಮದ ಸರ್ವೆ ನಂ.೬೪ ರ ಮುಂತಾದವು ಹೆತ್ತಿರದಲ್ಲಿರುವ ತಿಮ್ಮಜ್ಜ ಕೆರೆಯನ್ನು ಉಟಾವಣೆ ಮಾಡಿಸುವುದಕ್ಕಾಗಿ ಸರ್ಕಾರ ಸ್ವಾಧೀನಪಡಿಸಿಕೊಂಡಿದೆಯೆ, ಹಾಗಿದ್ದಲ್ಲಿ, ಮೇಲ್ಕಂಡ ಜಮೀನುಗಳನ್ನು ಯಾವಾಗ ಸ್ವಾಧೀನಪಡಿಸಿಕೊಳ್ಳಲಾಯಿತು,

ಆ) ಸದರೀ ಜಮೀನುಗಳು ಯಾರ ಒಡೆತನದಲ್ಲಿವೆ ಮತ್ತು ಎಷ್ಟೆಷ್ಟು ವಿಸ್ತೀರ್ಣವನ್ನು ವಶ ಪಡಿಸಿಕೊಳ್ಳಲಾಗಿದೆ, ಭೂಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳ ವಾರಸುದಾರರುಗಳಿಗೆ ಸರಕಾರ ದವರು ಪರಿಹಾರ ನೀಡುವರೆ, ಹಾಗಿದ್ದಲ್ಲಿ, ಪ್ರತಿ ಸರ್ವೆ ನಂಬರಿನ ಜಮೀನಿಗೆ ಸರ್ಕಾರದಿಂದ ನಿಗದಿ ಯಾಗುತ್ತಿರುವ ಮೊತ್ತವೆಷ್ಟು,

ಇ) ಜಮೀನು ಮಾಲೀಕರುಗಳಿಂದ ಸರ್ಕಾರಕ್ಕೆ ಸಾಕಷ್ಟು ಕೋರಿಕೆಗಳು ಬಂದಾಗ್ಯೂ ಈವರೆಗೆ ಹಣ ಪಾವತಿ ಮಾಡದೇ ಇರಲು ಕಾರಣವೇನು ಹಾಗೂ ಯಾವಾಗ ಪಾವತಿ ಮಾಡಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು).—

ಅ) ಇಲ್ಲ, ಆದರೆ ಫೆಬ್ರುವರಿ ೧೯೮೦ ರಂದು ತಿಮ್ಮಜ್ಜನ ಕೆರೆಯ ಉಟಾವಣೆಯ ಸಲುವಾಗಿ ಸ.ನಂ.೬೪ ರಲ್ಲಿ ೧೩ ಎಕರೆ ೨೮ ಗುಂಟೆ ಜಮೀನನ್ನು ಲೋಕೋಪಯೋಗಿ ಇಲಾಖೆಯು ಉಪಯೋಗಿಸಿ ಕೊಂಡಿದೆ.

ಆ) ಸದರಿ ಜಮೀನು ಲೋಕೋಪಯೋಗಿ ಇಲಾಖೆಯ ಒಡೆತನದಲ್ಲಿದೆ. ಸಂಬಂಧಪಟ್ಟ ಭೂ ಮಾಲೀಕರಿಗೆ ಭೂಸ್ವಾಧೀನದ ನಡೆವಳಿಕೆಯು ಪೂರ್ಣಗೊಂಡ ನಂತರ ಪರಿಹಾರ ಪಾವತಿ ಮಾಡಲಾಗುವುದು. ಭೂಸ್ವಾಧೀನ ಕಾಯ್ದೆಯ ಪ್ರಕಾರ ಪರಿಹಾರ ಹಣವನ್ನು ನೀಡಲಾಗುವುದು. ಐತೀರ್ಪು ಆನುಮೋದನೆಗೊಂಡ ನಂತರ ಪ್ರತಿ ಸ.ನಂ. ಗೂ ಪರಿಹಾರ ಮೊತ್ತವು ಗೊತ್ತಾಗುವುದು.

ಇ) ಭೂಸ್ವಾಧೀನ ನಡೆವಳಿಕೆಯು ಪೂರ್ಣಗೊಂಡ ನಂತರ ಪರಿಹಾರ ಪಾವತಿ ಮಾಡ ಲಾಗುವುದು.

ನರಸಿಂಹರಾಜಪುರ ತಾಲ್ಲೂಕು ಬಿ.ಕಣಬೂರು ಗ್ರಾಮದಲ್ಲಿ ಕಾನೂನು ಬಾಹಿರವಾಗಿ ನಿವೇಶನ ಹಂಚಿರುವ ಬಗ್ಗೆ.

೧೧೦೪. ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯಕಂದಾಯ, ಯೋಜನಾ ಮತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನರಸಿಂಹರಾಜಪುರ ತಾಲ್ಲೂಕು ಬಿ.ಕಣಬೂರು ಗ್ರಾಮಕ್ಕೆ ಸೇರಿದ ಸರ್ವೆ ನಂ.೧೦೫ ಮತ್ತು ೧೨೭ ಬನ್ನೂರು ೮೫, ಹಲಸೂರು ೯೬ ಮಂತ್ರ ೪೫ ರಲ್ಲಿ ಇರುವ ಜಮೀನು ಅರಣ್ಯ ಇಲಾಖೆಗೆ ಸೇರಿ ದ್ದರೂ ಸದರಿ ಜಮೀನನ್ನು ನಿವೇಶನಗಳನ್ನಾಗಿ ಪಂಗಡಿಸಿ ದಿನಾಂಕ ೨-೧೧-೮೬ ರಂದು ೨೫೭ ಮನೆ ನಿವೇಶನದ ಹಕ್ಕು ಪತ್ರ ವಿತರಣೆ ಮಾಡಿರುವುದು ನಿಜವೇ,

ಆ) ಈ ಬಗ್ಗೆ ಕೊಪ್ಪದಲ್ಲಿರುವ ಜಿಲ್ಲಾ ಅರಣ್ಯ ಅಧಿಕಾರಿ ಈ ನಿವೇಶನ ಹಂಚಿರುವ ಸ್ಥಳ ಅರಣ್ಯ ಇಲಾಖೆಗೆ ಸೇರಿರುವುದರಿಂದ ಹಕ್ಕು ಪತ್ರ ಕೊಟ್ಟಿರುವುದು ಊರ್ಜಿತ ಆಗುವುದಿಲ್ಲವೆಂದು ಪತ್ರಿಕಾ ಹೇಳಿಕೆ ಕೊಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ,